ಚುಚ್ಚುವಾಗ, ಅದೂ ಉಳಿದ ಮಕ್ಕಳು ಕ್ಯಾರೇ ಇಲ್ಲದೆ ರಪ ರಪ ಚಪ್ಪಲಿ ಕಾಲಿನ ಹೆಜ್ಜೆ ಹಾಕುತ್ತ ನಡೆಯುವಾಗ, ತಾನು ಮಾತ್ರ ಕಾಲಿಗೆ ಏನೂ ಚುಚ್ಚದ ಹಾಗೆ ನೋಡಿಕೊಂಡು ಜಾಗ್ರತೆಯಾಗಿ ಹೆಜ್ಜೆಯಿಡಬೇಕಾಗಿ ಬಂದಾಗ ತನಗೂ ಅವರಂತೆ ಚಪ್ಪಲಿಯಿದ್ದಿದ್ದರೆ ಎಂದು ಅನ್ನಿಸುತ್ತಿತ್ತು. ಅಪರೂಪಕ್ಕೊಮ್ಮೆ ಸ್ನೇಹಿತರು ತರಗತಿಯಲ್ಲಿ ಕಳಚಿಟ್ಟ ಚಪ್ಪಲಿಗಳನ್ನು ಅವರಿಗೆ ಕಾಣದಂತೆ ಹಾಕಿಕೊಂಡು ಸುಖಪಟ್ಟದ್ದೂ ಇತ್ತು.

ಹೈಸ್ಕೂಲಿನ ಎರಡನೇ ವರ್ಷದಲ್ಲಿದ್ದಾಗ ಸುತ್ತ ಮುತ್ತಲ ಖಾಸಗಿ ಶಾಲೆಗಳಲ್ಲಿ ಆಗಲೇ ಅನುಷ್ಠಾನಕ್ಕೆ ತಂದಿದ್ದ ಸಮವಸ್ತ್ರದ ನಿಯಮವನ್ನು ಅವನ ಶಾಲೆಯಲ್ಲೂ ಜಾರಿಗೆ ತಂದಿದ್ದರು. ವಿದ್ಯಾರ್ಥಿಗಳಿಗೆ ಬಿಳಿ ಅರ್ಧ ಕೈ ಅಂಗಿ ಖಾಕಿ ಚಡ್ಡಿ. ವಿದ್ಯಾರ್ಥಿನಿಯರಿಗೆ ನೀಲಿ ಬಣ್ಣದ ಲಂಗ ಮತ್ತು ಬಿಳಿ ರವಿಕೆ. ಸರಕಾರಿ ಶಾಲೆಯಾದರೂ ತೀರಾ ಸ್ಟ್ರಿಕ್ಟ್ ಆಗಿದ್ದ ಹೊಸತಾಗಿ ಬಂದಿದ್ದ ಆ ಮುಖ್ಯೋಪಾಧ್ಯಾಯರು ಮಕ್ಕಳಿಗೆ ಹದಿನೈದು ದಿನಗಳ ಗಡುವನ್ನು ಕೊಟ್ಟಿದ್ದರು. ಅಷ್ಟರೊಳಗೆ ಪ್ರತಿ ವಿದ್ಯಾರ್ಥಿಯೂ ಸಮವಸ್ತ್ರ ಧರಿಸಿ ಬರಲು ತಯಾರಾಗಬೇಕು ಮತ್ತು ಮುಂದೆ ಪ್ರತಿ ದಿನಗಳಲ್ಲೂ ಅದೇ ಕಡ್ಡಾಯ ಎಂದಿದ್ದರು.

ತಿಪ್ಪರಲಾಗ ಹಾಕಿದರೂ ಇವನಿಗೆ ಸಮವಸ್ತ್ರ ಹೊಲಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಮಳೆಗಾಲದ ಪ್ರಾರಂಭ. ದಿನವಿಡೀ ಸುರಿಯುತ್ತಿದ್ದ ಮಳೆಯಲ್ಲಿ ಮಾಡಲು ತಯಾರಿದ್ದರೂ ಕೆಲಸ ಕೊಡುವ ಮಂದಿಯೇ ಇಲ್ಲದಂತಹ ದಿನಗಳು. ಊಟಕ್ಕೇ ತತ್ವಾರ. ಬೆಳಿಗ್ಗೆ ಉಂಡರೆ ರಾತ್ರಿಗೆ ಇಲ್ಲ ಎನ್ನುವ ಪರಿಸ್ಥಿತಿ. ಅಂತಹುದರಲ್ಲಿ ಹೊಸ ಅಂಗಿ ಚಡ್ಡಿ ಹೊಲಿಸಿಕೊಳ್ಳಲು ಎಲ್ಲಿಯ ಹಣ.

ಅಂದೇ ಸಂಜೆ ಮನೆಗೆ ಬಂದವ ಅಮ್ಮನೊಂದಿಗೆ ಅದನ್ನೇ ಹೇಳಿಕೊಂಡು ಅತ್ತಿದ್ದ. 'ಬೇಡ, ನನಗೆ ಶಾಲೆಯೇ ಬೇಡ...' ಎಂದಿದ್ದ. ಅಳುತ್ತಿದ್ದ ಮಗನನ್ನು ಎದೆಗೊತ್ತಿಕೊಂಡ ಆ ತಾಯಿ 'ಹಾಗೆಲ್ಲ ಹೇಳಬೇಡ... ನೀನು ಶಾಲೆಗೆ ಹೋಗಲೇಬೇಕು...' ಅಷ್ಟು ಹೇಳಿದ ಅಮ್ಮ ಹರಕಲು ಗೋಣಿಯೊಂದನ್ನು ತಲೆಯ ಮೇಲೆ ಹಾಕಿಕೊಂಡು ಮಳೆಯಲ್ಲಿಯೇ ಹೊರಗೆ ಹೋದವಳು ರಾತ್ರಿ ತಡವಾಗಿ ತಿರುಗಿ ಬಂದಿದ್ದಳು. ಅಮ್ಮನಿಗಾಗಿ ಊಟ ನಿದ್ರೆಯನ್ನು ಬಿಟ್ಟು ಕಾದಿದ್ದ ಇವ. ಎಷ್ಟೋ ಹೊತ್ತಿಗೆ ಹಿಂತಿರುಗಿದ ಆ ಅಮ್ಮ ಬಸವಳಿದವಳಂತೆ ಕಾಣಿಸಿದ್ದರೂ ಒಳ ಬಂದವಳೇ ಇವನನ್ನು ಪುನಃ ತಬ್ಬಿಕೊಂಡು ಗೋಳೋ ಎಂದು ಅತ್ತಿದ್ದಳು. ಹಾಗೆಯೇ ಅಳು ತುಸು ಕಡಿಮೆಯಾದಾಗ ಸೆರಗಿನ ತುದಿಯ ಗಂಟು ಬಿಚ್ಚಿ ಅರ್ಧಂಬರ್ಧ ಒದ್ದೆಯಾಗಿದ್ದ ನೋಟುಗಳ ಮುದ್ದೆಯೊಂದನ್ನು ಇವನೆದುರಿಗೆ ಹಿಡಿದಿದ್ದಳು. ನೋಟುಗಳು ಹರಿಯದಂತೆ ನಿಧಾನವಾಗಿ ಬಿಡಿಸಿದ್ದ. ಅಂಗಿ ಚಡ್ಡಿಗೆ ಸಾಕಾಗುವಷ್ಟು ಇದೆ ಅನ್ನಿಸಿತ್ತು. 'ಎಲ್ಲಿಂದ ತಂದೆಯಮ್ಮ...' ಇವನ ಪ್ರಶ್ನೆಗೆ ಉತ್ತರ ಕೊಡದ ಅಮ್ಮ ಗೋಡೆಯತ್ತ ತಿರುಗಿದ್ದಳು.

ಆ ರಾತ್ರಿಯಿಡೀ ನಿದ್ದೆ ಮಾಡದ ಅಮ್ಮ ಅಳುತ್ತಲೇ ಬೆಳಗು ಮಾಡಿದುದನ್ನು ಇವ ಗಮನಿಸಿದ್ದ. ತನ್ನ ಶಾಲಾ ಸಮವಸ್ತ್ರದ ಸಲುವಾಗಿ ಅಮ್ಮ ಎಷ್ಟು ಕಷ್ಟಪಟ್ಟಿರಬಹುದು ಎನ್ನುವುದನ್ನು ಊಹಿಸಲಿಕ್ಕೂ ಸಾಧ್ಯವಾಗದ ಅವನಿಂದಲೂ ನಿದ್ದೆ ದೂರ ಓಡಿಹೋಗಿತ್ತು.

ಕಷ್ಟದಲ್ಲಿಯೇ ಕಲಿಯುತ್ತಿದ್ದರೂ ಓದಿನಲ್ಲಿ ತುಂಬ ಮುಂದೆ ಇದ್ದ. ಎಷ್ಟೆಂದರೆ ಮೇಷ್ಟ್ರುಗಳೇ 'ನೋಡಿ ಅಷ್ಟು ಬಡತನದಿಂದ ಬಂದ ಆ ಹುಡುಗ ಕಲಿಯುವುದರಲ್ಲಿ ಎಷ್ಟು ಹುಷಾರಿದ್ದಾನೆ ನೋಡಿ... ನಿಮಗೇನಾಗಿದೆ ಧಾಡಿ... ಅವನ ಕಾಲಡಿ ನುಸುಳಿ' ಎಂದು ಉಳಿದವರನ್ನು ಹೀಗಳೆಯುವಷ್ಟು. ಹಾಗಿದ್ದವನಿಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಣ ತುಂಬಿಸುವಾಗ ಪುನಃ ಕಷ್ಟ ಎದುರಾಗಿತ್ತು. ಕಲಿಯುವುದರಲ್ಲಿ ಹುಷಾರಿದ್ದಾನೆಂದು ಹೊಗಳಿದ ಯಾವ ಮೇಷ್ಟ್ರೂ ಹಣ ಸಹಾಯಕ್ಕೆ ಮುಂದೆ ಬರಲಿಲ್ಲ. ನಾಳೆ ಕಡೇ ದಿನ ಎನ್ನುವಾಗ ಪುನಃ ಅಮ್ಮನೆದುರು ಅತ್ತಿದ್ದ. 'ಅಮ್ಮ ನಂಗೆ ಈ ಶಾಲೆ ಗೀಲೆ ಎಲ್ಲ ಬೇಡ...'

'ಯಾಕೆ ಮಗೂ...'